ದಿನಾಂಕ 17.12.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ.N.B. ವಕೀಲರಿಂದ :**

8) ನನ್ನ ಗಂಡನ ಹೆಸರು ರಂಗರಾಜು. ನನ್ನನ್ನು ಗುಬ್ಬಿ ತಾಲ್ಲೂಕು ಕಡಬಾ ಗ್ರಾಮಕ್ಕೆ ಕೊಟ್ಟಿರುತ್ತಾರೆ. ಚಾಸಾ.2 ರವರು ನನ್ನ ತಂದೆಯ ತಮ್ಮನ ಹೆಂಡತಿ ಎಂದರೆ ಸರಿ. ಚಾಸಾ.3 ರವರೂ ಸಹ ನನ್ನ ತಂದೆಯ ಕಡೆಯ ತಮ್ಮನ ಹೆಂಡತಿ ಎಂದರೆ ಸರಿ. ಚಾಸಾ.4 ರವರು ನನ್ನ ತಂದೆಯ ತಂಗಿ ಎಂದರೆ ಸರಿ. ಅವರನ್ನೂ ಸಹ ಕಡಬಾ ಗ್ರಾಮಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ. ಅವರು ಕಡಬಾ ಗ್ರಾಮದಲ್ಲಿ ಗಂಡನೊಂದಿಗೆ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಚಾಸಾ.6 ರವರು ಚಾಸಾ.3 ರವರ ಗಂಡ ಎಂದರೆ ಸರಿ. ಚಾಸಾ.5 ರವರು ಚಾಸಾ.4 ರವರ ಸಂಬಂಧಿ ಎಂದರೆ ಗೊತ್ತಿಲ್ಲ. ಅವರು ನಮ್ಮ ಕುಟುಂಬದ ಸಂಬಂಧಿಯಲ್ಲ. ಚಾಸಾ.5 ರವರು ಯಾರು ಎಂದು ನನಗೆ ಗೊತ್ತಿಲ್ಲ.

9) 2 ನೇ ಆರೋಪಿಯು ದಿಃ14.10.2019 ರಂದು ನನ್ನ ತಂದೆ, ಚಾಸಾ.6, ಚಾಸಾ.2 ರವರ ಗಂಡನ ಮೇಲೆ ಚಿಕ್ಕನಾಯಕನಹಳ್ಳಿ ಪೋ.ಠಾಣೆಯಲ್ಲಿ ದೂರನ್ನು ಕೊಟ್ಟಿದ್ದರು ಎಂದರೆ ಸರಿ. ಆ ಬಗ್ಗೆ ಪ್ರಕರಣ ದಾಖಲಾಗಿ ಚಿಕ್ಕನಾಯಕನಹಳ್ಳಿ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಆದ್ದರಿಂದ ದಿಃ19.10.2019 ರಂದು ಆರೋಪಿತರ ವಿರುದ್ದ ನಾನು ಈ ಪ್ರತಿದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಜಮೀನಿನ ವಿಚಾರವಾಗಿ ಗಲಾಟೆಯಾಗಿರುತ್ತದೆ ಎಂದರೆ ಸರಿ. ಜಮೀನಿನ ಸ್ವಾಧೀನದಲ್ಲಿ ಯಾರು ಇರುತ್ತಾರೆ ಎಂದು ಅಳತೆ ಮಾಡಿಕೊಂಡುವಂತೆ ಚಿಕ್ಕನಾಯಕನಹಳ್ಳಿ ಪೊಲೀಸರು ಚಿಕ್ಕನಾಯಕನಹಳ್ಳಿಯ ಎ.ಡಿ.ಎಲ್.ಆರ್ ರವರಿಗೆ ಪತ್ರ ಬರೆದಿದ್ದರು ಎಂದರೆ ಸಾಕ್ಷಿಯು ಅಳತೆಗೆ ಬಂದಿದ್ದರು ಎಂದು ನುಡಿಯುತ್ತಾರೆ. ಅಳತೆ ಮಾಡಿದ ನಂತರ ವರದಿಯನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ.1 ನ್ನು ಚಾಸಾ.6 ರವರು ಟೈಪ್ ಮಾಡಿಸಿ ನನ್ನ ಸಹಿಯನ್ನು ಹಾಕಿಸಿಕೊಂಡು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲವಾದ್ದರಿಂದ ಅವರ ಮುಖಾಂತರ ದೂರನ್ನು

ಬರೆಸಿರುತ್ತೇವೆಂದು ನುಡಿಯುತ್ತಾರೆ. ಅವರು ಟೈಪ್ ಮಾಡಿಸಿರುವ ದೂರಿನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

10) 2 ನೇ ಆರೋಪಿ ನೀಡಿದ್ದ ದೂರಿನ ಆಧಾರದ ಮೇರೆಗೆ ಪೊಲೀಸರು ನನ್ನ ತಂದೆ ಮತ್ತು ಇತರರನ್ನು ಠಾಣೆಗೆ ಕರೆಸಿದರು ಎಂದರೆ ಸರಿ. ಆ ರೀತಿ ಠಾಣೆಗೆ ಕರೆಸಿದ ನಂತರ ನನ್ನ ಮುಖಾಂತರ ಈ ಪ್ರತಿದೂರನ್ನು ಆರೋಪಿತರ ವಿರುದ್ಧ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಸಿಂಗದಹಳ್ಳಿ ಗ್ರಾಮದ ಸ.ನಂ.24/1 ಎ 1 ಸಿ ರಲ್ಲಿ 12 ಗುಂಟೆ, 24/1 ಡಿಪಿ2 ರಲ್ಲಿ 13 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯ ಇರುತ್ತದೆ ಎಂದರೆ ಸರಿ. ಸ.ನಂ.24/1 ಎ 1 ಸಿ ಜಮೀನಿಗೆ ಸಂಬಂಧಿಸಿದಂತೆ 2 ನೇ ಆರೋಪಿಯ ಹೆಸರಿನಲ್ಲಿ ಖಾತೆ ಮತ್ತು ಪಹಣಿ ಇರುತ್ತದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಸ.ನಂ.24/1 ಡಿಪಿ2 ರ ಖಾತೆ ಮತ್ತು ಪಹಣಿ 1 ನೇ ಆರೋಪಿ ರಾಜಣ್ಣ ಅಲಿಯಾಸ್ ಬಸವರಾಜುರವರ ಹೆಸರಿನಲ್ಲಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಜಮಿನಿನ ವಿಚಾರವಾಗಿ ನಮ್ಮ ಮತ್ತು ಆರೋಪಿಗಳ ನಡುವೆ ಆಗಾಗ ಗಲಾಟೆಯಾಗುತ್ತದೆ ಎಂದರೆ ಸರಿ. ಆದ್ದರಿಂದ, 1 ನೇ ಆರೋಪಿ ನನ್ನ ತಂದೆ, ನನ್ನ ಚಿಕ್ಕಪ್ಪಂದಿರ ಮೇಲೆ ಒ.ಎಸ್.ನಂ.191/2019 ರಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ 2 ನೇ ಆರೋಪಿಯು ಸ.ನಂ.24/1 ಎ 1 ಸಿ ಜಮೀನಿಗೆ ಸಂಬಂಧಿಸಿದಂತೆ ನನ್ನ ತಂದೆ, ನನ್ನ ಚಿಕ್ಕಪ್ಪಂದಿರ ಮೇಲೆ ಒ.ಎಸ್.ನಂ.192/2019 ರಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣಗಳಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪಂದಿರು ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗಿ ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಸಲ್ಲಿಸಿರುವ ದಾವೆಯನ್ನು ನ್ಯಾಯಾಲಯ ಪುರಸ್ಕರಿಸಿ ಶಾಶ್ವತ ನಿರ್ಬಂಧಕಾಜ್ಞೆಯ ಡಿಕ್ರಿಯನ್ನು ನೀಡಿರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಸಲ್ಲಿಸಿರುವ ದಾವೆಯಲ್ಲಿ ತಾತ್ಕಾಲಿಕ ತಡೆಯಾಜ್ಞೆಯನ್ನು ನ್ಯಾಯಾಲಯ ನೀಡಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ದಾವೆಗಳು 1 ಮತ್ತು 2 ನೇ ಆರೋಪಿಗಳ

ಪರವಾಗಿ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11) ಸದರಿ ಜಮೀನುಗಳು ಸಿಂಗದಹಳ್ಳಿ ಗ್ರಾಮಕ್ಕೆ ಸುಮಾರು ಅರ್ಧ ಮುಕ್ಕಾಲು ಕಿ.ಮೀಟರ್ ದೂರದಲ್ಲಿರುತ್ತದೆ ಎಂದರೆ ಸಾಕ್ಷಿಯು ಒಂದು ಕಿ.ಮೀಟರ್ ದೂರ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರ ಊರಿನಿಂದ ಸದರಿ ಜಮೀನುಗಳಿಗೆ ಸುಮಾರು 3 ರಿಂದ 4 ಕಿ.ಮೀ ದೂರ ಇರುತ್ತದೆ ಎಂದರೆ ಸಾಕ್ಷಿಯ 2 ಕಿ.ಮೀ. ದೂರ ಇರುತ್ತದೆ ಎಂದು ನುಡಿಯುತ್ತಾರೆ. ಸುಮಾರು 3 ರಿಂದ 4 ಕಿ.ಮಿ ದೂರ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ಫಸಲು ಬಿಟ್ಟಿರುವಂತಹ ತೆಂಗು ಮತ್ತು ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ಸ.ನಂ.24/1 ಡಿಪಿ1 ರಲ್ಲಿ ಒಟ್ಟು 1 ಎಕರೆ 20 ಗುಂಟೆ ಅಡಿಕೆ ತೋಟದ ಜಮೀನು ಇರುತ್ತದೆ ಎಂದರೆ ಸರಿ. 1 ಮತ್ತು 2 ನೇ ಆರೋಪಿಗಳಿಗೆ ಸದರಿ ಜಮೀನು ಪಿತ್ರಾರ್ಜಿತ ಸ್ವತ್ತಾಗಿದ್ದು ಸುಮಾರು 60 ವರ್ಷಗಳಿಂದ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಿಃ12.10.2019 ರಂದು ಸದರಿ ಜಮೀನುಗಳ ಸ್ವಾಧೀನವನ್ನು ಹೇಗಾದರೂ ಮಾಡಿ ಪಡೆದುಕೊಳ್ಳಬೇಕು ಎಂದು ಲಗೇಜ್ ಆಟೋ ಮಾಡಿಕೊಂಡು ನಾನು, ನನ್ನ ತಂದೆ, ನನ್ನ ಚಿಕ್ಕಪ್ಪಂದಿರು ಅತಿಕ್ರಮ ಪ್ರವೇಶ ಮಾಡಿ ಸುಮಾರು ಎರಡು ಕ್ವಿಂಟಾಲ್ ಅಡಿಕೆ ಕಾಯಿಯನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಂದೆಗೆ ಓಡಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಓಡಾಡಿಕೊಂಡು ಗಟ್ಟಿಮುಟ್ಟಾಗಿರುತ್ತಾರೆ ಎಂದರೆ ಸರಿಯಲ್ಲ.

12) ಸದರಿ ಜಮೀನುಗಳ ಅಕ್ಕಪಕ್ಕದಲ್ಲಿ ದೊಡ್ಡರಂಗಯ್ಯ ಬಿನ್ ಲೇಟ್ ಕರೆರಂಗಪ್ಪ , ಆಂಜನಪ್ಪ ಬಿನ್ ಹನುಮಶೆಟ್ಟಿ ರವರ ಜಮೀನು ಇರುತ್ತವೆ ಎಂದರೆ ಸರಿ. ಸದರಿ ಆಂಜನಪ್ಪರವರು ಈ ಪ್ರಕರಣದ 4 ನೇ ಆರೋಪಿ ಎಂದರೆ ಸರಿ. ನಾವು ಸದರಿ ಜಮೀನುಗಳಿಗೆ ಅತಿಕ್ರಮ ಪ್ರವೇಶ ಮಾಡಿ ಅಡಿಕೆ ಕಾಯಿಗಳನ್ನು ಕಳ್ಳತನ ಮಾಡಿಕೊಂಡು ಹೋದಾಗ 1 ಮತ್ತು 2 ನೇ ಆರೋಪಿಗಳು ಸ್ಥಳದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು

ನಾವು ಹೋಗಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ದೊಡ್ಡರಂಗಯ್ಯ ಬಿನ್ ಲೇಟ್ ಕರೆರಂಗಪ್ಪ , ಆಂಜನಪ್ಪ ಬಿನ್ ಹನುಮಶೆಟ್ಟಿರವರು 1 ಮತ್ತು 2 ನೇ ಆರೋಪಿತರಿಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರ ಗೊತ್ತಾದ ನಂತರ 1 ಮತ್ತು 2 ನೇ ಆರೋಪಿಗಳು ನಮ್ಮಗಳ ವಿರುದ್ದ ಚಿಕ್ಕನಾಯಕನಹಳ್ಳಿ ಪೋ.ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

13) ನಿಪಿ.2 ರ ಮೇಲೆ ಚಿಕ್ಕನಾಯಕನಹಳ್ಳಿ ಪೋ.ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಗೊತ್ತಿಲ್ಲ. ನಿಪಿ.2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾ.6 ರವರು ನನಗೆ ಹೇಳಿಕೊಟ್ಟಂತೆ ನಾನು ನ್ಯಾಯಾಲಯದ ಮುಂದೆ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಸ.ನಂ.24/1 ಎಫ್ ರಲ್ಲಿರುವ 1 ಎಕರೆ 12 ಗುಂಟೆ ಜಮೀನಿನ ಪಹಣಿಯಲ್ಲಿ ಇರುವ ಸಣ್ಣತಿಮ್ಮಯ್ಯ ಬಿನ್ ತಿಮ್ಮಯ್ಯ ನನ್ನ ತಾತ ಎಂದು ಮೇಲೆ ಹೇಳಿದ 1 ಮತ್ತು 2 ನೇ ಆರೋಪಿತರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಗಲಾಟೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾತ ಸದರಿ ಜಮೀನನ್ನು ಯಾವಾಗ ಖರೀದಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಸಣ್ಣತಿಮ್ಮಯ್ಯ ಬಿನ್ ತಿಮ್ಮಯ್ಯ ರವರು ನಮ್ಮ ಕುಟುಂಬಕ್ಕೆ ಸೇರಿದ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ. ಸ.ನಂ.24/1 ಎಫ್ ರಲ್ಲಿ ಜಮೀನು ಇಲ್ಲ ಎಂದರೆ ಸರಿಯಲ್ಲ. ಸ.ನಂ.24/1 ಎಫ್ ನಲ್ಲಿ ಯಾವುದೇ ಜಮೀನು ಇಲ್ಲ ಎಂದು ಮೋಜಣಿದಾರರು ಹೇಳಿದಾಗ ಅವರಿಗೆ ನಾವು ಅಳತೆ ಮಾಡಲು ಬಿಟ್ಟಿಲ್ಲ ಎಂದರೆ ಸರಿಯಲ್ಲ. ಅವರ ಮೇಲೆ ಅಳತೆ ಮಾಡಬಾರದು ಎಂದು ಗಲಾಟೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಜಾತಿ ನಿಂದನೆ ಪ್ರಕರಣ ದಾಖಲು ಮಾಡಿದರೆ ಸದರಿ ಜಮೀನಿನ ಸ್ವಾಧೀನವನ್ನು ಬಿಟ್ಟು ಕೊಡುತ್ತಾರೆ ಎಂದು ಈ ಕೇಸನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

14) ಅಂದಾಜು 3 ವರ್ಷಗಳ ಹಿಂದೆ ಮಧ್ಯಾಹ್ನ 3 ಗಂಟೆ ಸುಮಾರಿಗೆ ನಾನು ಜಮೀನಿಗೆ ಹೋಗಿ ತೋಟದಲ್ಲಿ ಅಡಿಕೆ ಪಟ್ಟೆ ಕುಯ್ಯುತ್ತಿದ್ದಾಗ ಆರೋಪಿ ರಾಜಣ್ಣ ರವರು ಅಲ್ಲಿಗೆ

ಬಂದು ನನ್ನ ಜೊತೆ ಗಲಾಟೆ ಮಾಡಿ ಮಾದಿಗ ಮುಂಡೆ, ಸೂಳೇ ಮುಂಡೆ ಎಂದು ಬೈದು ಜಾತಿ ನಿಂದನೆ ಮಾಡಿ ಚಪ್ಪಲಿ ಕಾಲಿನಿಂದ ಹೊಟ್ಟೆಯ ಭಾಗಕ್ಕೆ ಒದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಹೊರತುಪಡಿಸಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ಕೊಟ್ಟ ಒಂದು ವಾರದ ನಂತರ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ದೂರಿನಲ್ಲಿ ಆರೋಪಿ ರಾಜಣ್ಣ ರವರು ಚಪ್ಪಲಿ ಕಾಲಿನಿಂದ ಹೊಟ್ಟೆಯ ಭಾಗಕ್ಕೆ ಒದ್ದರು ಎಂದು ಬರೆಸಿಲ್ಲ ಎಂದರೆ ಸರಿಯಲ್ಲ.

15) ಆರೋಪಿ ರಾಜಣ್ಣ ರವರನ್ನು ಬಸವರಾಜು ಎಂದೂ ಸಹ ಕರೆಯುತ್ತಾರೆ ಎಂದರೆ ಸರಿ. ಆರೋಪಿ ಗಂಗಣ್ಣ ರವರು ನನ್ನೊಂದಿಗೆ ಜಗಳ ತೆಗೆದು ಮಾದಿಗ ಸೂಳೇ ಎಂದು ಬೈದು ಈ ಮುಂಡೆಯನ್ನು ಇದೇ ಜಮೀನಿನಲ್ಲಿ ರೇಪ್ ಮಾಡಿ ಸಾಯಿಸಿ ಹಾಕೋಣ ಎಂದು ಹೇಳಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಓಡಿ ಹೋಗಲು ಪ್ರಯತ್ನಿಸಿದಾಗ 2 ನೇ ಆರೋಪಿ ನನ್ನನ್ನು ಬೆನ್ನಟ್ಟಿ ನೈಟಿಯ ಎದೆಯ ಭಾಗದಲ್ಲಿ ಹರಿದು ಹಾಕಿದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.2 ರವರು ಜಗಳವನ್ನು ಬಿಡಿಸಿಕೊಳ್ಳಲು ಬಂದಾಗ 2 ನೇ ಆರೋಪಿ ದೊಣ್ಣೆಯಿಂದ ಹೊಡೆದಿರುತ್ತಾನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿಯೇ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ.2 ರವರು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಸದರಿ ವಿಚಾರವನ್ನು ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಆಗ ಆರೋಪಿ ಆಂಜನಪ್ಪರವರು ಚಾಸಾ.2 ರವರಿಗೆ ಹೊಡೆಯುತ್ತಿದ್ದರು , ಆರೋಪಿತರು ನಾವು ಉಳುಮೆ ಮಾಡುತ್ತಿದ್ದ ಜಮೀನು ತಮ್ಮದು ಎಂದು ಗಲಾಟೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ದಿಃ 12.10.2019 ರಂದು ನಾನು ಪೋ.ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಪೋ.ಠಾಣೆಗೆ ದೂರು ನೀಡಲು ನಾನು ಒಬ್ಬಳೇ ಹೋಗಿದ್ದೆ. ದೂರನ್ನು

ಪಡೆದುಕೊಂಡ ನಂತರ ಪೊಲೀಸರು ಸ್ಥಳಕ್ಕೆ ಬಂದು ಅಕ್ಕಪಕ್ಕದ ಜನರನ್ನು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿ. ಆಗ ಅಕ್ಕಪಕ್ಕದ ಜನರು ನಾವೇ ಆರೋಪಿತರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಅಡಿಕೆ ಕಾಯಿಗಳನ್ನು ಕಿತ್ತುಕೊಂಡು ಹೋಗಿರುತ್ತೇವೆಂದು ಹೇಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ, ನಾನು ಕೊಟ್ಟಿದ್ದ ದೂರಿನ ಮೇಲೆ ಯಾವುದೇ ಪ್ರಕರಣವನ್ನು ದಾಖಲು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಂತರ ಪೊಲೀಸರು ಸ್ಥಳಕ್ಕೆ ಬಂದು ಮೋಹನ, ಆನಂದ, ಗಿರಿಯಪ್ಪರವರು ಹಾಜರಿದ್ದು ಆಗ ಪೊಲೀಸರು ಸ್ಥಳ ಮಹಜರ್ ಮಾಡಿಕೊಂಡಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16) ಮು.ಮಾ.1 ಮತ್ತು 2 ನ್ನು ನಾನು ಪೋ.ಠಾಣೆಗೆ ಹೋಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರನ್ನು ಕೊಟ್ಟ ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಪೊಲೀಸರು ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರಿಗೆ ಸೇರಿದ ತೋಟದಲ್ಲಿ ಛಾವಚಿತ್ರಗಳನ್ನು ತೆಗೆಸಿದ್ದೇನೆ ಎಂದರೆ ಸರಿಯಲ್ಲ. ಜಮೀನನ್ನು ಹೊಡೆಯುವ ಉದ್ದೇಶದಿಂದ ನಾನು, ನನ್ನ ತಂದೆ, ನನ್ನ ಚಿಕ್ಕಪ್ಪಂದಿರು ಶಾಮೀಲಾಗಿ ಆರೋಪಿತರ ವಿರುದ್ದ ಜಾತಿ ನಿಂದನೆ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನನ್ನ ಮೂಲಕ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಇಂದು ನಾನು ನ್ಯಾಯಾಲಯಕ್ಕೆ ನನ್ನ ತಂದೆ ಮತ್ತು ಚಾಸಾ.6 ರವರೊಂದಿಗೆ ಬಂದಿರುತ್ತೇನೆ ಎಂದರೆ ಸಾಕ್ಷಿಯು ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಚಾಸಾ.6 ರವರು ಈಗ ನ್ಯಾಯಾಲಯದ ಹೊರಗೆ ಇರುತ್ತಾರೆ ಎಂದರೆ ಸರಿ. ನನ್ನ ತಂದೆ ಆರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ